ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ,
ಮೈಸೂರು-570017
Telephone No: 0821-2343384

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,CESC, Mysore-570017
**Web Site:** www.cescmysore.org.
**E-Mail:** gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ:ಪ್ರವ್ಯ(ಆ.ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿ.ಸ-2/21-22/ Cys-1606 ದಿನಾಂಕ: 14 JAN 2022
ಲಗತ್ತು: 02 ಹಾಳೆಗಳು.

# ಸುತ್ತೋಲೆ

**ವಿಷಯ:** ಅಧಿಕಾರಿಗಳು ಮತ್ತು ನೌಕರರು 2021ನೇ ಸಾಲಿನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವಾರ್ಷಿಕ ವಿವರ ಪಟ್ಟಿಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ನಿರ್ದೇಶಕರು(ಆ ಮತ್ತು ಮಾ.ಸಂ.) ಕವಿಪ್ರನಿನಿ., ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ:ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ:24.11.2021.

*****

ಚಾವಿಸನಿನಿ ನೌಕರರ ಸೇವಾ(ನಡೆತೆ) ನಿಯಮಗಳು 2021 ನಿಯಮಾವಳಿ 24ರ ಅನ್ವಯ ಅಧಿಕಾರಿಗಳು/ ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆ ವಿವರಗಳನ್ನು ಪ್ರತಿ ವರ್ಷವೂ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಸಿಬ್ಬಂದಿ ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ನಿಗದಿತ ದಿನಾಂಕದಂದು ಸಲ್ಲಿಸದಿದ್ದಲ್ಲಿ, ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು.

ಈ ವಿಷಯದಲ್ಲಿ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1. ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಗಳಲ್ಲಿ ನಿಗಮದ ಸಿಬ್ಬಂದಿ ಈ ಕ್ಯಾಲೆಂಡರ್ ವರ್ಷದ ಅಂತ್ಯಕ್ಕೆ ಇರುವಂತೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಭರ್ತಿಮಾಡಿ ಸಲ್ಲಿಸತಕ್ಕದ್ದು.
2. ರಾಜ್ಯಾವಾರು ಪದವೃಂದದ ಅಧಿಕಾರಿಗಳು ವಿವರಗಳನ್ನು ಹಾಗೂ **ತಮ್ಮ ಪಿನ್ ಸಂಖ್ಯೆಯನ್ನು** ತಪ್ಪದೇ ನಮೂದಿಸಿ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.), ಚಾವಿಸನಿನಿ., ನಿಗಮ ಕಛೇರಿ, ಮೈಸೂರುರವರಿಗೆ ನೇರವಾಗಿ ಕಳುಹಿಸತಕ್ಕದ್ದು, **ಪಿನ್ ಸಂಖ್ಯೆಯನ್ನು** ನಮೂದಿಸದೇ ಇರುವ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.
3. ಸಿಬ್ಬಂದಿ **ತಮ್ಮ 2021ರ ಕ್ಯಾಲೆಂಡರ್ ವರ್ಷದ** ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು **ಕೊನೆಯ ದಿನಾಂಕ:28.02.2022.** ವಿವರವನ್ನು ಸಲ್ಲಿಸದ ಸಿಬ್ಬಂದಿಯ ವಿರುದ್ಧ **ದಿನಾಂಕ:01.04.2022ರ ನಂತರ** ಸಂಬಂಧಿಸಿದ ಮೇಲಾಧಿಕಾರಿಗಳು ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.
4. "ಎ" ಮತ್ತು "ಬಿ" ಗುಂಪಿನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಿದ ಬಗ್ಗೆ **ಮಾರ್ಚ್ 2022ರ ಮಾಹೆಯ ವೇತನದ ಹುಂಡಿಯಲ್ಲಿ** ದೃಢೀಕರಿಸತಕ್ಕದ್ದು.
5. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಈ ವಿವರವನ್ನು "ಸಿ" ಮತ್ತು "ಡಿ" ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೇ ತರಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಲ್ಲಿಸಬೇಕಿರುವ **ನಮೂನೆಯನ್ನು** ಚಾವಿಸನಿನಿಯ ಜಾಲತಾಣದ: www.cescmysore.org ಯಲ್ಲಿ ಪಡೆಯಬಹುದಾಗಿದೆ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು

**ಪ್ರತಿಗಳು:**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರುರವರ ಅವಗಾಹನೆಗಾಗಿ.

**ಪು.ತಿ.ನೋ.**

- ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು/ಹಾಸನರವರ ಅವಗಾಹನೆಗಾಗಿ.
- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ.
- ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು/ಚಾಮರಾಗನಗರ-ಕೊಡಗು/ಹಾಸನ/ಮಂಡ್ಯ ರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿರವರ ಮಾಹಿತಿಗಾಗಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ನಿಗಮ ಕಛೇರಿ, ಮೈಸೂರು.
- ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಉಪ ವಿಭಾಗ ವ್ಯಾಪ್ತಿಯ ಶಾಖಾ ಕಛೇರಿಗೆ ಪ್ರತಿಯನ್ನು ಕಳುಹಿಸಿ ಅಗತ್ಯ ಕ್ರಮವಹಿಸಲು ತಿಳಿಸಿದೆ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಸಲಹೆಗಾರರು ರವರ ಗಮನಕ್ಕೆ ತರುವಂತೆ ಕೋರಿದೆ.
- ಸ-2(ಆ ಮತ್ತು ಮಾ.ಸಂ)/ಪ್ರ.ಕಡತ.

## ನಮೂನೆ-I

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

2021ನೇ ಸಾಲಿಗೆ ಸಂಬಂಧಿಸಿದ ಸ್ಥಿರಾಸ್ತಿ ವಿವರಣ ಪಟ್ಟಿ
(31ನೇ ಡಿಸೆಂಬರ್ 2021ರಂದು ಇದ್ದಂತೆ)

1. ಅಧಿಕಾರಿ/ನೌಕರರ ಹೆಸರು :
2. ಪಿನ್ ಸಂಖ್ಯೆ (ಇದ್ದಲ್ಲಿ) :
3. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ :
4. ಪ್ರಸ್ತುತ ವೇತನ :

| ಆಸ್ತಿ ಇರುವ ಜಿಲ್ಲೆ, ಉಪವಿಭಾಗ, ತಾಲ್ಲೂಕು, ಗ್ರಾಮದ ಹೆಸರು | ಭೂಮಿ, ಆಸ್ತಿ/ಮನೆ ಮತ್ತು ಇತರೆ ಕಟ್ಟಡದ ಹೆಸರು ಮತ್ತು ವಿವರಗಳು, ಪಾವತಿಸಿರುವ ಬೆಲೆ | ಈಗಿನ ಮೌಲ್ಯ ಮಾಪನ (ಅಂದಾಜು) | ನಿಗಮದ ನೌಕರನ ಹೆಸರಿನಲ್ಲಿಲ್ಲದಿದ್ದರೆ, ಯಾರ ಹೆಸರಿನಲ್ಲಿದೆ ಮತ್ತು ನೌಕರನೊಂದಿಗೆ ಅವರಿಗಿರುವ ಸಂಬಂಧ | ಹೇಗೆ ಅರ್ಜಿಸಲಾಯಿತು, ಖರೀದಿಯ ಮೂಲಕವೇ, ಅಡಮಾನದ ಮೂಲಕವೇ, ಪಿತ್ರಾರ್ಜಿತವೇ ಅಥವಾ ಬೇರೆ ರೀತಿಯಲ್ಲಿ ಅರ್ಜಿಸಿದ್ದೇ? ಅರ್ಜಿಸಿದ ದಿನಾಂಕ | ಆಸ್ತಿಯಿಂದ ಬಂದ ವಾರ್ಷಿಕ ಆದಾಯ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸಹಿ:

ಪದನಾಮ:

## ನಮೂನೆ-II

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

2021ನೇ ಸಾಲಿಗೆ ಸಂಬಂಧಿಸಿದ ಚರಾಸ್ತಿ ವಿವರಣ ಪಟ್ಟಿ
(31ನೇ ಡಿಸೆಂಬರ್ 2021ರಂದು ಇದ್ದಂತೆ)

1. ಹೆಸರು :
2. ಪದನಾಮ :
3. ವೇತನ ಶ್ರೇಣಿ ಮತ್ತು ಈಗಿನ ವೇತನ :

| ಕ್ರ.ಸಂ. | ಬ್ಯಾಂಕುಗಳು/ಅಂಚೆ ಕಛೇರಿಯಲ್ಲಿ ಹೊಂದಿರುವ ಖಾತೆಗಳು/ಸ್ಟಾಕುಗಳು/ಷೇರುಗಳು/ಡಿಬೆಂಚರುಗಳು ಸೇರಿದಂತೆ ಚರಾಸ್ತಿಗಳ ವಿವರಗಳು | ಚರಾಸ್ತಿಯ ಮೌಲ್ಯ | ಖರೀದಿ/ವಿಲೇವಾರಿಯ ದಿನಾಂಕ: | ಅಂಕಣ ಸಂ.2ರಲ್ಲಿ ಹೇಳಿರುವ ಚರಾಸ್ತಿಯನ್ನು ಖರೀದಿಸುವುದಕ್ಕೆ ಇದ್ದ ಆದಾಯದ ಮೂಲಗಳು | ಆಸ್ತಿಯನ್ನು ಅರ್ಜಿಸಿದ ಬಗ್ಗೆ ನಿಗಮಕ್ಕೆ ವರದಿ ಸಲ್ಲಿಸಿದ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |

ಸಹಿ:
ಪದನಾಮ: